ಅಲ್ಲವೇ ಎಂದು ಕೇಳಿದ. 'ತಿಂದರೆ ತಿನ್ನಲಿ ಬಿಡಣ್ಣ... ಅವುಗಳ ಹೊಟ್ಟೆಯಾದರೂ ತುಂಬುತ್ತದಲ್ಲಾ... ನಾನೀಗ ಬಾಳಿ ಬದುಕಿ ಸಾಧಿಸೋದು ಏನಿದೆ...?' ಎಂದ. ಮೌನ ಅವರಿಬ್ಬರ ನಡುವೆ ನಿಂತಿತ್ತು.

'ನಿನ್ನ ಬೆನ್ನಿಗೆ ಅಂಟಿಕೊಂಡು ಯಾರು ಜೊತೆಗೆ ಬಂದಿದ್ದಾರಣ್ಣಾ...' 'ಯಾರು ಇಲ್ಲಪ್ಪ... ಶವಗಳ ಸವಾರ ನಾನಷ್ಟೇ.' 'ನಿನ್ನ ನೆರಳು ನಿನ್ನ ಜೊತೆಯೇ ಬಂದಿದೆಯಲ್ಲಣ್ಣಾ...' 'ಹೇ; ಅದು ಗೊತ್ತು... ಅದು ಸಾವು ಬರ್ಲೇಬೇಕು. ಬರುತ್ತೆ... ವೇದಾಂತಕ್ಕೆ ಸ್ವಲ್ಪ ಗೌರವ ಕೊಡು; ಇಂಥಾ ತರ್ಲೆ ಪ್ರಶ್ನೆಗಳ ಕೇಳಬೇಡ.' 'ನಾನು ನಿನ್ನ ಶವ ಅಲ್ಲೇನಣ್ಣಾ... ಸರಿಯಾದ ದಾರಿ ತೋರಣ್ಣ...' 'ಹೌದಪ್ಪ... ನೀನೇ ಒಂದು ಸಾವು. ನಿನ್ನ ಕಟ್ಟಿಕೊಂಡು ಬಂದೆನಲ್ಲಾ... ನಡಿನಡೀ ದಾರಿ ತೋರುವೆ' ಎನ್ನುತ್ತಾ ಬಡಬಡ ಗೇರ್ ಬದಲಿಸಿದ. ಅದು ಪಿಶಾಚಿ ಹೂಂಕರಿಸುವಂತೆ ಮುನ್ನುಗ್ಗಿತ್ತು.

ಬೆಟ್ಟದಿಂದ ಇಳಿಜಾರು ದಾರಿ. ಹೊತ್ತುಕೊಂಡು ಓಡುವ ಹುಚ್ಚು ಕುದುರೆಯಂತೆಯೋ, ಬಿರುಗಾಳಿಯಂತೆಯೋ ಸಾಗುತ್ತಿದ್ದ ಗಾಡಿಗೆ ಸರಿಯಾದ ಬ್ರೇಕೇ ಇರಲಿಲ್ಲ. ಕಮರಿಗೆ ಉರುಳುತ್ತದೆ ಎನಿಸಿ ಇಬ್ಬರೂ ಉಲ್ಲಾಸದಿಂದ ಕಿರುಚಿದಂತೆ ಕನೆದು ಕುಣಿದಾಡುವ ಜೀವಗಳ ಹಿಡಿದು ಕೊಂಡರು. ಭಾಗಶಃ ಅವರಿಬ್ಬರೂ ಯಾರ ಕಣ್ಣಿಗೂ ಕಾಣುತ್ತಿರಲಿಲ್ಲವೋ; ಇಲ್ಲವೇ ಯಾರೂ ಅವರ ದೃಷ್ಟಿಗೆ ಎಟುಕುತ್ತಿರಲಿಲ್ಲವೋ ತಿಳಿಯದಾಗಿತ್ತು. ಲೋಭಿಯಾದ ಜಗತ್ತಿಗೆ ಅವರೊಂದು ಕಸದಂತೆ ಕಂಡಿದ್ದರೇನೊ. ಅವರ ಗಹನವಾದ ಇಹ-ಪರಗಳ ಚರ್ಚೆಗೆ ಕಿವಿಗೊಡುವಂತೆ ಶವಗಳ ಹೊತ್ತೊಯ್ಯುವ ಆ ಬಂಡಿಯು ಅರ್ಧ ದಾರಿಯಲ್ಲೇ ಸತ್ತು ಹೋಗುವಂತೆ ಆಗಾಗ ಅವರ ಮಾತಿಗೆ ಏದುಸಿರು ಬಿಡುತ್ತಿತ್ತು. ಗಾಡಿ ಬಹಳ ದಣಿದಿತ್ತು. ಅದೆಷ್ಟು ಶವಗಳಿಗೆ ದಾರಿ ತೋರಿತ್ತೋ; ಒಂದಾದರೂ ಹೆಣ ಹೊತ್ತು ಬಂದು ದಡ ತಲುಪಿಸಿದ್ದಕ್ಕೆ ಒಂದು ಶವವಾದರೂ ನನಗೆ ಪುಟ್ಟದೊಂದು ಕೃತಜ್ಞತೆಯನ್ನು ಹೇಳಲೇಇಲ್ಲ. ಇನ್ನು ಇವರು ತಾನೆ ನನ್ನ ಕೊನೆ ಪಯಣದಲ್ಲಿ ಈ ಮರುಭೂಮಿಯಲ್ಲಿ ತುಕ್ಕು ಹಿಡಿದು ಸಾಯಿ ಎಂದು ಬಿಟ್ಟು ಹೋಗಬಲ್ಲರಷ್ಟೇ ಎಂದು ವೈರಾಗ್ಯ ತಾಳಿತು.

ಆ ಮರುಭೂಮಿಗೆ ಯಾವ ರಸ್ತೆಗಳೂ ಇರಲಿಲ್ಲ. ಸುಮ್ಮನೆ ಹೋಗುತ್ತಿರಬೇಕು ಅಷ್ಟೇ; ದಾರಿಯ ತಾನೇ ಕಂಡುಕೊಳ್ಳುತ್ತದೆ. 'ಫಸ್ಟ್ ಗೇರ್‌ಗೆ ಹಾಕಣ್ಣ, ಎಳೀತದೇ' ಎಂದ ಕುಂಟ. 'ಕೊನೆಗೆ ಯಾವ ಗೇರ್‌ಗೆ ಹಾಕುದ್ರು ಅಷ್ಟೇ ಬಿಟ್ರೂ ಅಷ್ಟೇ... ಇದರ ಕಥೆ ಮುಗೀತಾ ಇದೆ ಅನ್ಸುತ್ತೆ... ಮುಂದೆ ನೋಡೋಣ ತಾಳು... ಇಲ್ಲೇ ನಿಲ್ಲಿಸಿ ಕಾಯೋಣ. ಇಲ್ಲೇನೊ ತಂಪು ಹವೆ ಇದೆ. ಮರುಭೂಮಿಗಳಿಗೂ ಮಾಯದ ಮಳೆ ಬರುತ್ತಂತೆ. ಯಾವ ಸಾವಿನ ಮಳೆಯೋ ಏನೋ... ಚಕ್ರಗಳು ಮರುಭೂಮಿಯಲ್ಲಿ ಹೂತು ಹೋದರೆ ನಾವೂ ಅಲ್ಲೇ ಮಣ್ಣು ಎಳೆದುಕೊಂಡಂತೆ' ಎಂದು ಎಂಜಿನ್ ಪರಿಶೀಲಿಸಿದ. ಚಕ್ರಗಳ ಗಾಳಿ ಕಡಿಮೆ ಆಗಿತ್ತು.

ಆದರೂ ಸಾಯಲು ಅದಕ್ಕೆ ಮನಸ್ಸಿರಲಿಲ್ಲ. ದಣಿವಾರಿಸಿಕೊಂಡು ಅವರಿಬ್ಬರ ವಿಧಿ ನನ್ನ ಕೈಯಲ್ಲೇ ಇಲ್ಲ ಎಂದುಕೊಳ್ಳುತ್ತಿತ್ತು. ಮಳೆ ಮೋಡಗಳು ತಲೆ ಮೇಲೆ ಹಾರಿ ಹೋಗುತ್ತಿದ್ದವು. ಮಂದಗತಿಯ ಚಲನೆ. ಹಿಂತಿರುಗುವ ದಾರಿಯೇ ಮರೆತು ಹೋಗಿತ್ತು. ಜಗತ್ತಿನ ಎಲ್ಲ ದಾರಿಗಳು ಎಲ್ಲಿ ಒಂದಾಗುತ್ತವೆ ಗೊತ್ತೇನಣ್ಣಾ ಎಂದು ಕೇಳಿದ ಕುಂಟ. ನಾವೀಗ ದಾರಿ ಇಲ್ಲದ ದಾರಿಗೆ ಬಂದಿದ್ದೇವೆ; ಸುಮ್ಮನಿರು ಎಂದ ಸವಾರ. ದಾರಿ ತೀರುತ್ತಲೇ ಇರಲಿಲ್ಲ. ಕಾಲ, ದೇಶಗಳೇ ಮರೆತು ಹೋಗಿದ್ದವು. ತನ್ನ ತೊಟ್ಟಿಲಿಗೆ ಬಂದು ಇವರಿಬ್ಬರೂ ಆಟ ಆಡುತ್ತಿದ್ದಾರೆ; ಅವಳಿಜವಳಿ ಹುಟ್ಟು ಸಾವುಗಳು ಎಂಬಂತೆ ಆ ವಿಶಾಲ ಮರುಭೂಮಿ ಅವರ ತಾಳ್ಮೆಯ ಪರೀಕ್ಷೆ ಮಾಡುತ್ತಿತ್ತು. ಅವರ ವಿಶ್ವಾಸಕ್ಕೆ ಕೊನೆಯೇ ಇರಲಿಲ್ಲ. ಎಷ್ಟೋ ರಾತ್ರಿಗಳ ದಾಟಿದರು. ತಾರೆಗಳು ಅವರ ಕಂಡು; ಓಹ್ ಇವರ ಪಯಣ ಇನ್ನೂ ಮುಗಿದಿಲ್ಲವೇ ಎಂದು ಗಮನಿಸುತ್ತಿದ್ದವು. ವೈರಾಗ್ಯದ ತುತ್ತತುದಿಯಲ್ಲಿದ್ದರು. ಅರಿವಿನ ಬೆನ್ನೇರಿ ಅರಿವನ್ನೇ ಮರೆತಂತಿದ್ದರು. ಅಸಂಗತ ನಿಶೆಯಲ್ಲಿ ತೇಲಾಡುತ್ತಿದ್ದರು. ಎಲ್ಲಿಂದ ಮನುಷ್ಯ ಎಲ್ಲಿಗೆ ಬಂದ ಎಂದು ಹಿಂತಿರುಗಿ ನೋಡಿದರು. ದೈತ್ಯಾಕಾರದ ಬೆಟ್ಟ ಸಾಲುಗಳು ಬೆನ್ನ ಹಿಂದೆಯೇ ಬರುತ್ತಿದ್ದವು. ಏನೋ ಮರೆತಿದ್ದೇವೇ ಎಂದ ಬಂಡಿಗ. ಅಂತಾದ್ದೇನನ್ನೂ ನಾವು ಸಂಪಾದಿಸಿಯೇ ಇರಲಿಲ್ಲವಲ್ಲಾ... ಮರೆತರೇ ಚೆಂದ. ವಿದಾಯವೇ ಅಂದ, ಆನಂದ ಎನ್ನುತ್ತಾ